ತಮ್ಮ ಇಚ್ಛೆಯನ್ನು ವ್ಯಕ್ತಪಡಿಸತಕ್ಕದ್ದು ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ನೊಂದಾಯಿಸಿಕೊಳ್ಳತಕ್ಕದ್ದು. ಯೋಜನೆಯ ಗ್ರಾಮ ಪಂಚಾಯತಿಗಳನ್ನು ಪಾರದರ್ಶಕ ಅರ್ಹತೆ ಮತ್ತು ಆದ್ಯತಾ ಪ್ರಮಾಣಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

5. ಗ್ರಾಮ ಪಂಚಾಯತಿಗಳಿಗೆ ಅನುದಾನ ವಾಸ್ತವಿಕ ನಕ್ಷೆ ಮತ್ತು ಅಂದಾಜು ಮೇಲೆ ಅವಲಂಬಿಸಿರುತ್ತದೆ.

6. ಹೆಚ್ಚಿನ ಯೋಜನೆಯ ಜಿಲ್ಲೆಗಳು ಮತ್ತು ಯೋಜನೆಯ ಪ್ರದೇಶ ಕೃಷ್ಣ ನದಿ ಕಣಿವೆಗೆ ಸೇರಿರುತ್ತವೆ, ಇದರ ಜಲಸಂಪನ್ಮೂಲಗಳು ಗ್ರಾಮೀಣ ನೀರು ಸರಬರಾಜು ಯೋಜನೆಯಲ್ಲಿ ಮುಖ್ಯ ಅಂಶವಾಗಿರುತ್ತದೆ.

ಬಿಜಾಪುರ ಜಿಲ್ಲೆಯಲ್ಲಿ ಸರಕಾರಿ ಪದವಿ ಕಾಲೇಜನ್ನು ಪ್ರಾರಂಭಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1160(1411)

ಸದಸ್ಯರ ಹೆಸರು: ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ(ತಿಕೋಟ)

ಉತ್ತರಿಸುವ ಸಚಿವರು: ಡಾ॥ ಜಿ.ಪರಮೇಶ್ವರ(ಉನ್ನತ ಶಿಕ್ಷಣ ಸಚಿವರು)

ಪ್ರಶ್ನೆ

ಅ) ಬಿಜಾಪುರ ಜಿಲ್ಲೆಯ ಶೈಕ್ಷಣಿಕ ರಂಗದಲ್ಲಿ ತುಂಬಾ ಹಿಂದುಳಿದ ಎನ್ನುವ ಅಂಶ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಸರಕಾರಿ ಪದವಿ ಕಾಲೇಜುಗಳಿವೆ?

ಇ) ಬಡತನದ ರೇಖೆಗಿಂತ ಕೆಳಗಿರುವ ಬಿಜಾಪುರ ಜಿಲ್ಲೆಯಲ್ಲಿ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಖಾಸಗಿ ಪದವಿ ಕಾಲೇಜುಗಳಿಗೆ ಸೇರುವುದು ತುಂಬಾ ಕಷ್ಟ ಎನ್ನುವುದನ್ನು ಸರ್ಕಾರ ಗಮನಿಸಿದೆಯೆ?

ಈ) ಹಾಗಿದ್ದರೆ, ಈ ಜಿಲ್ಲೆಯಲ್ಲಿ ಸರಕಾರಿ ಪದವಿ ಕಾಲೇಜಿನ ಅವಶ್ಯಕತೆಯಿರುವುದು ಸರ್ಕಾರ ಮನಗಂಡಿದೆಯೆ? ಹಾಗಿದ್ದಲ್ಲಿ, ಇದಕ್ಕಾಗಿ ಏನು ಕ್ರಮ ಕೈಗೊಳ್ಳಲಾಗುವುದು?

ಉ) ಹಾಗೂ ನಿರ್ದಿಷ್ಟವಾದ ಕಾಲಮಿತಿ ತಿಳಿಸುವುದು?

ಉತ್ತರ

ಅ) ಹೌದು.

ಆ) ಯಾವುದೂ ಇಲ್ಲ.

ಇ) ಇಲ್ಲ.

ಈ) ಸದ್ಯಕ್ಕೆ ಇಲ್ಲ.

ಉ) ಉದ್ಭವಿಸುವುದಿಲ್ಲ.

ತಿಕೋಟ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಕಟ್ಟಡಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1161(1412)

ಸದಸ್ಯರ ಹೆಸರು: ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ(ತಿಕೋಟ)

ಉತ್ತರಿಸುವ ಸಚಿವರು: ಶ್ರೀ ಹೆಚ್.ಎಶ್ವನಾಥ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆ

1) ಬಿಜಾಪುರ ತಾಲ್ಲೂಕಿನ ತಿಕೋಟ ಮತಕ್ಷೇತ್ರದಲ್ಲಿ ಇರುವ ಒಟ್ಟು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳೆಷ್ಟು?

2) ಕಟ್ಟಡಗಳು ಇರುವ ಶಾಲೆಗಳ ಸಂಖ್ಯೆ ಎಷ್ಟು?

3) ಇನ್ನೂ ಎಷ್ಟು ಶಾಲೆಗಳಿಗೆ ಕಟ್ಟಡಗಳ ಅವಶ್ಯಕತೆ ಇದೆ ಅವುಗಳ ಸಂಖ್ಯೆ ಎಷ್ಟು?

4) ದುರಸ್ಥಿಗೆ ಒಳಗಾಗಬೇಕಿರುವ ಕಟ್ಟಡಗಳ ಸಂಖ್ಯೆ ಎಷ್ಟು?

5) ಪ್ರಸಕ್ತ ವರ್ಷದಲ್ಲಿ ಶಾಲಾ ಕಟ್ಟಡಗಳ ನಿರ್ಮಾಣ ಕೆಲಸ ಕೈಗೊಳ್ಳಲಾಗಿದೆಯೇ ಮತ್ತು ದುರಸ್ಥಿ ಕೆಲಸ ಕೈಗೊಳ್ಳಲಾಗಿದೆಯೇ?

6) ಹಾಗಿದ್ದರೆ ಯಾವ ಯಾವ ಶಾಲೆಗಳಿಗೆ ಕಟ್ಟಡಗಳನ್ನು ನಿರ್ಮಸಲಾಗುವುದು ಮತ್ತು ದುರಸ್ಥಿ ಕೆಲಸ ನಡೆಸಲಾಗುವುದು : ಕಾಲಮಿತಿ ತಿಳಿಸುವುದು?